**ನಾಡೋಜ ಡಾ. ಮಹೇಶ ಜೋಶಿ**
**ಅಧ್ಯಕ್ಷರು**
ಸಂಚಾರಿ ದೂರವಾಣಿ : +೯೧ ೯೪೪೮೪ ೯೦೨೪೦
+೯೧ ೮೦೫೩೦ ೦೬೮೫೪
ಮಿಂಚಂಚೆ : nadojamj@gmail.com

ಸ್ಥಾಪನೆ : ೧೯೧೫

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪
ದೂರಪತ್ರಕ : ೦೮೦ ೨೬೫೨೩೮೬೭

ಕ್ರಮಸಂಖ್ಯೆ : ಕಸಾಪ/ಆಪ್ತಶಾಖೆ/ದಾಖಲೆ/೨೦೨೨-೨೩

ದಿನಾಂಕ ೦೩-೦೬-೨೦೨೨

ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ.
ಆಡಳಿತಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸನ್ಮಾನ್ಯರೆ,

**ವಿಷಯ : ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಕಚೇರಿಯ ಮುಂಭಾಗದ ರಸ್ತೆಯನ್ನು ವಿಶೇಷ ರಸ್ತೆ ಎಂದು ಪರಿಗಣಿಸಿ ಪ್ರೇಕ್ಷಣೀಯ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕುರಿತು.**

* * * *

೧. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿಯ ಮೂಲ ಧ್ಯೇಯೋದ್ದೇಶಗಳೊಂದಿಗೆ ಕನ್ನಡ-ಕನ್ನಡಿಗ-ಕರ್ನಾಟಕದ ಹಿತರಕ್ಷಣೆ ಕಾಪಾಡುವ ಜವಾಬ್ದಾರಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊಂದಿದೆ. ಮೈಸೂರು ಮಹಾರಾಜರಾದ **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್** ಅವರ ಪೋಷಣೆಯೊಂದಿಗೆ, **ಸರ್ ಎಂ. ವಿಶ್ವೇಶ್ವರಯ್ಯ** ಹಾಗೂ **ಸರ್ ಮಿರ್ಜಾ ಇಸ್ಮಾಯಿಲ್** ಅವರ ಸಹಕಾರದೊಂದಿಗೆ ಸ್ಥಾಪಿತವಾದ ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಹಾಗೂ ಎಲ್ಲ ಕನ್ನಡ ಸಂಘ-ಸಂಸ್ಥೆಗಳ ಮಾತೃ ಸಂಸ್ಥೆಯಾದ **ಕನ್ನಡ ಸಾಹಿತ್ಯ ಪರಿಷತ್ತು ೧೦೭ ವರ್ಷಗಳ** ಸುದೀರ್ಘ ಹಾಗೂ ಶ್ರೀಮಂತ ಇತಿಹಾಸ ಹೊಂದಿದೆ.

೨. ೩೧ ಜಿಲ್ಲೆ, ಎಲ್ಲ ತಾಲ್ಲೂಕುಗಳು ಹಾಗೂ ೬ ಗಡಿರಾಜ್ಯಗಳಲ್ಲಿ ಪರಿಷತ್ತು ತನ್ನ ಘಟಕಗಳನ್ನು ಹೊಂದಿದ್ದು, ೩.೫ ಲಕ್ಷಕ್ಕೂ ಅಧಿಕ ಆಜೀವ ಸದಸ್ಯರನ್ನು ಹೊಂದಿದೆ. ಕನ್ನಡ ಸಾಹಿತ್ಯ ಪರಿಷತ್ತನ್ನು 'ಜನಸಾಮಾನ್ಯರ ಪರಿಷತ್ತನ್ನಾಗಿಸುವ' ನಿಟ್ಟಿನಲ್ಲಿ ಕಾರ್ಯಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

೩. **ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಚೇರಿ ಚಾಮರಾಜಪೇಟೆಯ ಪಂಪ ಮಹಾಕವಿ ರಸ್ತೆಯಲ್ಲಿ ನೆಲೆಗೊಂಡಿದೆ.** ಪುಸ್ತಕ ಮಾರಾಟ ಕೇಂದ್ರ, ಬಿ.ಎಂ. ಶ್ರೀ ಅಚ್ಚುಕೂಟ(ಮುದ್ರಣಾಲಯ), ಸರಸ್ವತೀ ಗ್ರಂಥಭಂಡಾರ, ಸಂಶೋಧನಾ ಕೇಂದ್ರ, ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕುವೆಂಪು ಸಭಾಂಗಣ, ಸೇರಿದಂತೆ ಆಡಳಿತ ಕಚೇರಿಯನ್ನು ಪರಿಷತ್ತು ಹೊಂದಿದೆ. **ಶ್ರೀಕೃಷ್ಣರಾಜ ಪರಿಷನ್ಮಂದಿರ ಕಟ್ಟಡ ನಿರ್ಮಾಣಗೊಂಡು ೯೦ಕ್ಕೂ (ತೊಂಭತ್ತು) ಹೆಚ್ಚು ವರ್ಷಗಳು ಕಳೆದಿದ್ದು, ಪಾರಂಪರಿಕ ಕಟ್ಟಡಗಳ ಸಾಲಿಗೆ ಸೇರಲಿದೆ.**

೪. ಇಂತಹ ಐತಿಹಾಸಿಕ ಹಾಗೂ ನಾಡು-ನುಡಿಗೆ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳಲ್ಲಿ ಅಗ್ರಪಂಕ್ತಿಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡವನ್ನು ಆಕರ್ಷಣೀಯಗೊಳಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಪರಿಷತ್ತಿನ ಮುಂಭಾಗದಲ್ಲಿರುವ ಪಂಪ ಮಹಾಕವಿ ರಸ್ತೆಯು, ಮಿಂಟೋ ಕಣ್ಣಿನ ಆಸ್ಪತ್ರೆಯಿಂದ ನ್ಯಾಷನಲ್ ಕಾಲೇಜು

೨ನೇ ಪುಟಕ್ಕೆ....

ರಸ್ತೆ ತುದಿಯವರೆಗೆ ಇದ್ದು, ನಾಡಿನಾದ್ಯಂತ ಪರಿಷತ್ತಿನ ಕೆಲಸಗಳಿಗೆ ಆಗಮಿಸುವ ಸಾಹಿತ್ಯಾಸಕ್ತರಿಗೆ, ಕನ್ನಡಾಭಿಮಾನಿಗಳಿಗೆ ಹಾಗೂ ಸಾರ್ವಜನಿಕರಿಗೆ ಪರಿಷತ್ತಿನ ಕಚೇರಿ ಸ್ಥಾನವನ್ನು ಗುರುತಿಸಲು ಅನುಕೂಲವಾಗುವಂತೆ ಮಿಂಟೋ ಕಣ್ಣಿನ ಆಸ್ಪತ್ರೆಯಿಂದ – ಮಕ್ಕಳ ಕೂಟ ವೃತ್ತದವರೆಗೆ ಕನ್ನಡಮಯ ರಸ್ತೆಯನ್ನಾಗಿಸಿ ಅಭಿವೃದ್ಧಿಪಡಿಸಬೇಕಿದೆ.

೫. ಭವ್ಯ ಇತಿಹಾಸ ಹಾಗೂ ಪರಂಪರೆಯನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಈ ರಸ್ತೆಯನ್ನು ವಿಶೇಷ ರಸ್ತೆ ಎಂದು ಪರಿಗಣಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸೌಂದರ್ಯೀಕರಣಗೊಳಿಸುವುದು, ಕನ್ನಡ ಗೀತೆಗಳ ಸಂಗೀತವನ್ನು ಅಳವಡಿಸುವುದು ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ಬೆಂಗಳೂರಿಗೆ ಬರುವವರು, ಪರಿಷತ್ತು ಇರುವ ಈ ವಿಶೇಷ ರಸ್ತೆಗೆ ಬಂದು ನೋಡಿಕೊಂಡು ಹೋಗುವಂತೆ ಆಕರ್ಷಕವಾದ, ಪ್ರೇಕ್ಷಣೀಯ ರಸ್ತೆಯನ್ನಾಗಿ ಮಾರ್ಪಾಡಿಸಬೇಕೆಂದು ತಮ್ಮನ್ನು ಕೋರುತ್ತಿದ್ದೇನೆ.

೫. ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗೆ, ಕನ್ನಡ–ಕನ್ನಡಿಗ–ಕರ್ನಾಟಕದ ಏಳಿಗೆಯ ಬಗ್ಗೆ ಅಭಿಮಾನ ತಳೆದಿರುವ ತಾವು, ಈ ಅಗತ್ಯ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಶೀಘ್ರವಾಗಿ ಮಾಡಿಸಿಕೊಡಬೇಕೆಂದು ವಿನಂತಿಸುತ್ತೇನೆ.

೬. ಈ ಸಂಬಂಧ ತಮ್ಮೊಡನೆ ಚರ್ಚಿಸಲು ಭೇಟಿಗಾಗಿ ದಿನಾಂಕ ಮತ್ತು ಸಮಯ ನಿಗದಿಪಡಿಸಿ ತಿಳಿಸಬೇಕೆಂದು ಕೋರುತ್ತೇನೆ. ಪರಿಷತ್ತಿನ ಈ ಮನವಿಯ ಬಗೆಗೆ ತಾವು ಸಕಾರಾತ್ಮಕವಾಗಿ ಸ್ಪಂದಿಸುತ್ತೀರೆಂಬ ವಿಶ್ವಾಸವಿದೆ.

ತಮ್ಮ ಉತ್ತರದ ನಿರೀಕ್ಷೆಯಲ್ಲಿ...

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**(ನಾಡೋಜ ಡಾ. ಮಹೇಶ ಜೋಶಿ)**

ಅಧ್ಯಕ್ಷರು